ರಾಜ್ಯದಲ್ಲಿ ವಿವಿಧ ಮೂಲಗಳಿಂದ ಬರುವ ಆದಾಯ

87 (704)- ಶ್ರೀ ಬೆಲ್ಲದ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದ ಆದಾಯ ವಿವಿಧ ಮೂಲಗಳಿಂದ ಅಂದರೆ, ಮಾರಾಟ ಕರ, ಅಬಕಾರಿಕರ, ನೊಂದಣಿಕರ ಹಾಗೂ ಇತರ ಮೂಲದ ವಿವರವನ್ನು ಕಳೆದ 3 ವರ್ಷಗಳಿಗೆ ನೀಡುವುದು.

ಆ. ಕೇಂದ್ರ ಸರಕಾರದಿಂದ ರಾಜ್ಯದ ವಿವಿಧ ಅಭಿವೃದ್ಧಿ ಕಾರ್ಯಗಳಿಗಾಗಿ ಬರುವ ಹಣದ ವಿವರವನ್ನು ಪ್ರತ್ಯೇಕವಾಗಿ ಕಳೆದ 3 ವರ್ಷಗಳಿಗೆ ನೀಡುವುದು.

ಇ. ರಾಜ್ಯ ಸರಕಾರ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳ ಯೋಜನೆಗಳನ್ನು ಪೂರ್ಣ ಮಾಡಲು ಹುಡ್ಕೋ, ನಬಾರ್ಡ್, ವಿಶ್ವ ಬ್ಯಾಂಕ್ ಜೀವ ವಿಮಾ ಮತ್ತು ವಿವಿಧ ಮೂಲಗಳಿಂದ ಸಾಲವಾಗಿ/ ಅನುದಾನವಾಗಿ ತಂದಿರುವ ಹಣಗಳ ವಿವರಗಳನ್ನು ಪ್ರತ್ಯೇಕವಾಗಿ ಕಳೆದ 3 ವರ್ಷಗಳಿಗೆ ನೀಡುವುದು?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಯವರು)

ಅ. ವಿವಿಧ ಮೂಲಗಳಿಂದ ಕಳೆದ ಮೂರು ವರ್ಷಗಳಲ್ಲಿ ಬಂದಿರುವ ವಿವರಗಳು ಈ ಕೆಳಕಂಡಂತಿರುತ್ತದೆ:

(ರೂ.ಕೋಟಿಗಳಲ್ಲಿ)

ತೆರಿಗೆ ರಾಜಸ್ವ	1999-2000 ಲೆಕ್ಕ	2000-2001 ಲೆಕ್ಕ	2001-2002 ಪರಿಷ್ಕೃತ ಅಂದಾಜು
ಮಾರಾಟ ತೆರಿಗೆ	4683.23	5386.33	5581.67
ಕೃಷಿ ವರಮಾನ ತೆರಿಗೆ	34.80	23.48	33.32
ವೃತ್ತಿ ತೆರಿಗೆ	132.78	135.52	142.77
ರಾಜ್ಯ ಅಬಕಾರಿ	1215.20	1523.13	2009.22
ಮುದ್ರಾಂಕ ಮತ್ತು ನೋಂದಣಿ ಶುಲ್ಕ	565.79	638.13	880.05
ಮೋಟಾರು ವಾಹನ ಮೇಲಣ ತೆರಿಗೆ	448.82	501.82	634.92
ಸರಕುಗಳು ಮತ್ತು ಪ್ರಯಾಣಿಕರ ಮೇಲಣ ತೆರಿಗೆ	337.60	473.02	430.99
ವಿದ್ಯುಚ್ಛಕ್ತಿಯ ಮೇಲಣ ತೆರಿಗೆ	155.58	162.10	175.59
ಭೂಕಂದಾಯ	38.73	43.16	52.13
ಇತರ ತೆರಿಗೆ ಮತ್ತು ಶುಲ್ಕ	131.83	151.58	188.09
ಒಟ್ಟು	7744.36	9038.27	10128.75
I ತೆರಿಗೆ ರಹಿತ ರಾಜ್ಯಸ್ವ	1611.29	1659.97	1212.27
II ಕೇಂದ್ರ ಸರ್ಕಾರದಿಂದ ಸಂಪನ್ಮೂಲ	3550.80	4124.48	4585.27
ಒಟ್ಟು ರಾಜಸ್ವ ಜಮೆ (I+II+III)	12906.45	14822.72	15926.29

ಆ. ಕೇಂದ್ರ ಸರ್ಕಾರದಿಂದ ರಾಜ್ಯದ ವಿವಿಧ ಅಭಿವೃದ್ಧಿ ಕಾರ್ಯಗಳಿಗಾಗಿ ಕಳೆದ ಮೂರು ಸಾಲುಗಳಲ್ಲಿ ಬಂದಿರುವ ಹಣದ ವಿವರಗಳು:

(ರೂ.ಕೋಟಿಗಳಲ್ಲಿ.)

ಯೋಜನೆಯ	1999-2000		2000-2001		2001-2002	
ಹೆಸರು	ಅನುದಾನ	ಸಾಲ	ಅನುದಾನ	ಸಾಲ	ಅನುದಾನ	ಸಾಲ
ಯೋಜನೇತರ	150.71	3.26	246.04	41.43	229.82	39.76
ರಾಜ್ಯ ಯೋಜನೆ	532.72	900.73	621.71	1029.40	852.81	1908.03
ಕೇಂದ್ರ ಯೋಜನೆ	135.94	0.17	154.39	0.04	237.13	0.16
ಕೇಂದ್ರ ಪುರಸ್ಕೃತ ಯೋಜನೆ	598.65	23.57	524.10	4.78.	757.91	17.98
ಒಟ್ಟು	1418.02	927.73	1546.24	1075.65	2077.67	1965.93

ಇ. ರಾಜ್ಯ ಸರ್ಕಾರವು ವಿವಿಧ ಮೂಲಗಳಿಂದ ಪಡೆದಿರುವ ಅಂತರಿಕೆ ಸಾಲದ ಕಳೆದ ಮೂರು ವರ್ಷಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ:

(ರೂ.ಕೋಟಿಗಳಲ್ಲಿ.)

	1999-2000	2000-2001	2001-2002
ಮಾರುಕಟ್ಟೆ ಸಾಲು	903.88	825.61	1134.62
ಎಲ್.ಐ.ಸಿ.ಸಾಲ	243.26	168.09	160.00
ಜಿ.ಐ.ಸಿ.ಸಾಲ	-	28.51	8.00
ನಬಾರ್ಡ್ ಸಾಲ	141.17	212.54	230.00
ಎನ್.ಸಿ.ಡಿ.ಸಿ.ಸಾಲ	6.69	16.39	13.65
ಇತರೆ ಸಾಲಗಳು	949.92	1044.43	1285.14
ಒಟ್ಟು	2324.85	2295.59	2831.41

ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಮೂಲಕ ರಾಜ್ಯ ಯೋಜನೆಗಳಿಗೆ ವಿಶ್ವ ಬ್ಯಾಂಕ್‌ನಿಂದ ಕಳೆದ ಮೂರು ಸಾಲುಗಳಲ್ಲಿ ಪಡೆದಿರುವ ಸಾಲ ಮತ್ತು ಅನುದಾನದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ವರ್ಷ	ಸಾಲ	ಅನುದಾನ	ಒಟ್ಟು
1999-2000 (ಲೆಕ್ಕ)	153.12	65.63	218.75
2000-2001(ಲೆಕ್ಕ)	140.70	60.31	201.01
2001-2002	897.57	384.67	1282.24

(ತಾತ್ಕಾಲಿಕ ಲೆಕ್ಕ)